ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು–1**

**ಸಂಖ್ಯೆ ಸಿ1(4) ಕ.ಪ.ಶಾ: 18/2019–20,** **ದಿನಾಂಕ: 19.12.2020**

**–:ಜ್ಞಾಪನ:–**

**ವಿಷಯ:** ಹೊಸದಾಗಿ ಪ್ರಾರಂಭಿಸಲಾದ ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ 114 ಗ್ರೂಪ್ ಬಿ ವೃಂದದ ಮುಖ್ಯಶಿಕ್ಷಕರು/ **ಉಪ ಪ್ರಾಂಶುಪಾಲರ** ಹುದ್ದೆಗಳ ಸೃಜನೆ ಬಗ್ಗೆ.

**ಉಲ್ಲೇಖ:** 1] ಸರ್ಕಾರಿ ಆದೇಶ ಸಂಖ್ಯೆ ಇಡಿ 04 ಯೋಸಕ 2017, ದಿನಾಂಕ: 05.01.2018 ಮತ್ತು ದಿ:21.08.2018

2] ಸರ್ಕಾರಿ ಆದೇಶ ಸಂಖ್ಯೆ ಇಡಿ 230 ಯೋಸಕ 2018, ದಿನಾಂಕ: 18.05.2019 ಮತ್ತು ದಿ:21.08.2018

3] ಈ ಕಛೇರಿ ಸಮ ಸಂಖ್ಯೆ ಪತ್ರ ದಿನಾಂಕ: 20.09.2019 ಮತ್ತು ದಿ: 30/12/2019

4] ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು ಇವರ ಪತ್ರ ಸಂಖ್ಯೆ: 12331/ ಎಸ್.ಎಸ್.ಕೆ.ಕೆ.ಪಿ.ಎಸ್. ಕ್ರಿ.ಯೋ. ಅನುದಾನ:2018–19, ದಿನಾಂಕ:15.10.2019

5] ದಿನಾಂಕ: 07/11/2020 ರಂದು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಿರುವಂತೆ.

******

ಉಲ್ಲೇಖ (1) ಮತ್ತು (2) ರ ಸರ್ಕಾರದ ಆದೇಶದಂತೆ 276 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಹೊಸದಾಗಿ ಪ್ರಾರಂಭಿಸಲಾಗಿರುತ್ತದೆ. ಈ ರೀತಿ ಪ್ರಾರಂಭಿಸಲಾದ 276 ಕರ್ನಾಟಕ ಪಬ್ಲಿಕ್ ಶಾಲೆಗಳ ಪೈಕಿ 114 ಶಾಲೆಗಳಲ್ಲಿ ಗ್ರೂಪ್ ಬಿ ವೃಂದದ ಮುಖ್ಯಶಿಕ್ಷಕರು/ **ಉಪ ಪ್ರಾಂಶುಪಾಲರ** ಹುದ್ದೆಗಳ ಸೃಜನೆ ಬಗ್ಗೆ ದಿನಾಂಕ: 07/11/2020 ರಂದು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಶಿಕ್ಷಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಸಭೆ ಏರ್ಪಡಿಸಿದ್ದು ಈ ಸಭೆಯಲ್ಲಿ ಕೆಳಕಂಡ ಅಧಿಕಾರಿಗಳು ಭಾಗವಹಿಸಿರುತ್ತಾರೆ.

1. ಶ್ರೀ. ಮಂಜುನಾಥ, ಸಿ. ಜಂಟಿ ನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ.
2. ಶ್ರೀ. ಕೃಷ್ಣಾಜಿ ಎಸ್ ಕರಿಚಣ್ಣವರ, ನಿರ್ದೇಶಕರು (ಪ್ರೌಢ ಶಿಕ್ಷಣ),
3. ಶ್ರೀ. ಗೋಪಾಲಕೃಷ್ಣ, ನಿರ್ದೇಶಕರು, ಎಸ್.ಎಸ್.ಎ.
4. ಶ್ರೀ. ರತ್ನಯ್ಯ, ಜಂಟಿ ನಿರ್ದೇಶಕರು, ಎಸ್.ಎಸ್.ಎ.

ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಗ್ರೂಪ್ ವೃಂದದ ಮುಖ್ಯಶಿಕ್ಷಕರ/ಉಪಪ್ರಾಂಶುಪಾಲರ ಹುದ್ದೆಗಳ ಸೃಜನೆ ಬಗ್ಗೆ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಪ್ರಸ್ತಾಪಿಸಿ, ಪ್ರಸ್ತುತ ಕೋವಿಡ್–19 ಹಾಗೂ ಹಣಕಾಸಿನ ಸಂಕಷ್ಟದ ಹಿನ್ನಲೆಯಲ್ಲಿ ಹುದ್ದೆಗಳನ್ನು ಸೃಜಿಸಲು ಸಾಧ್ಯವಾಗದೇ ಇರುವ ಬಗ್ಗೆ ಸೂಚ್ಯವಾಗಿ ತಿಳಿಸಿ, ಕೆಳಕಂಡಂತೆ ಕಛೇರಿ, ವಿದ್ಯಾ ಸಂಸ್ಥೆಗಳಲ್ಲಿ ಹೆಚ್ಚುವರಿ ಇರುವುದನ್ನು ಗುರುತಿಸಿ Re-Diployment ಮಾಡುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಿರುತ್ತಾರೆ.

- ಡಿ ಎಡ್ ವಿದ್ಯಾ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಇಲ್ಲದ ಕಡೆ, ಸಂಸ್ಥೆ ಮುಚ್ಚಲ್ಪಟ್ಟ ಕಡೆ, ಗುರುತಿಸಿ ಉಪಪ್ರಾಂಶುಪಾಲರ ಹುದ್ದೆ ಗುರುತಿಸುವುದು.
- ಜಿಲ್ಲಾ ಹಂತದಲ್ಲಿ ಉಪನಿರ್ದೇಶಕರ ಕಛೇರಿ/ ಡಯಟ್ ಗಳಲ್ಲಿ ಹೆಚ್ಚುವರಿ ಇರುವುದನ್ನು ಗುರುತಿಸುವುದು.
- ವಯಸ್ಕರ ಶಿಕ್ಷಣ ಇಲಾಖೆಯಲ್ಲಿ ಹೆಚ್ಚುವರಿ ಇರುವುದನ್ನು ಗುರುತಿಸುವುದು.
- ತಾಲ್ಲೂಕು ಹಂತದಲ್ಲಿ ಹೆಚ್ಚುವರಿ ಇರುವುದನ್ನು ಗುರುತಿಸುವುದು.

ಆದ್ದರಿಂದ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು ಮತ್ತು ಅಧಿಕಾರಿಗಳು ತಮ್ಮ ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಈ ಮೇಲ್ಕಂಡಂತೆ ಕಛೇರಿ/ವಿದ್ಯಾ ಸಂಸ್ಥೆಗಳಲ್ಲಿ ಹೆಚ್ಚುವರಿ ಇರುವ ಹುದ್ದೆಗಳನ್ನು ಗುರುತಿಸಿ, ತಮ್ಮ ಜಿಲ್ಲೆಯಲ್ಲಿರುವ ಮುಖ್ಯ ಶಿಕ್ಷಕರ/ಉಪಪ್ರಾಂಶುಪಾಲರ ಹುದ್ದೆ ಮಂಜೂರಾತಿ ಇಲ್ಲದೇ ಇರುವ ಯಾವ ಯಾವ ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಸ್ಥಳಾಂತರಿಸಬಹುದು ಎಂಬುದರ ಬಗ್ಗೆ ಸ್ಪಷ್ಟ ಮಾಹಿತಿಯನ್ನು ತುರ್ತಾಗಿ ಹಾರ್ಡ್ ಮತ್ತು ಸಾಫ್ಟ್ ಪ್ರತಿಯೊಂದಿಗೆ ಸಲ್ಲಿಸಲು ತಿಳಿಸಿದೆ. (ಇ ಮೇಲ್ ವಿಳಾಸ: est1cpi@gmail.com)

23.12.20

(ಎನ್. ಕೆಂಚೇಗೌಡ)
ಜಂಟಿ ನಿರ್ದೇಶಕರು (ಆಡಳಿತ),ಪ್ರಭಾರ

**ರವರಿಗೆ,**

ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು (ಆಡಳಿತ ಮತ್ತು ಅಭಿವೃದ್ಧಿ) ತುರ್ತು ಕ್ರಮಕ್ಕಾಗಿ,

**ಪ್ರತಿಗಳು:**

1] ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-1 ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

2] ನಿರ್ದೇಶಕರು, ರಾಜ್ಯಶಿಕ್ಷಣ ಮತ್ತು ಸಂಶೋಧನೆ ಮತ್ತು ತರಬೇತಿ ಇಲಾಖೆ, ನಂ 4, 100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು-85 ರವರಿಗೆ ಅಗತ್ಯ ಕ್ರಮಕ್ಕಾಗಿ,

3} ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು ಮಾಹಿತಿಗಾಗಿ,

4} ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ರೊದ್ದ ರಸ್ತೆ, ಧಾರವಾಡ ರವರಿಗೆ ಕ್ರಮಕ್ಕಾಗಿ,

5} ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಐವಾನ್ ಎ ಶಾಹಿ, ಬಡಾವಣೆ, ಕಲಬುರ್ಗಿ ರವರಿಗೆ ಕ್ರಮಕ್ಕಾಗಿ,

6] ನಿರ್ದೇಶಕರು, ಲೋಕ ಶಿಕ್ಷಣ ನಿರ್ದೇಶನಾಲಯ, ಮಲ್ಲೇಶ್ವರಂ, ಬೆಂಗಳೂರು ರವರಿಗೆ ಮಾಹಿತಿಗಾಗಿ.

7} ಕಛೇರಿ ಪ್ರತಿ